2

# ವಿಶ್ವಾಸ ಮತ್ತು ಬಾಪ್ತಿಸ್ಮ

> *"ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ಅವರು ನೀತಿವಂತರೆಂದು ನಿರ್ಣಯ ಹೊಂದುವುದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು" (ರೋಮಾಪುರ 3:23-25ಎ).*

"ನಂಬಿಕೆಯಿಂದ ಮಾತ್ರವೇ" ರಕ್ಷಣೆಯ ತತ್ವವನ್ನು ನಂಬುವವರು ಸಾಮಾನ್ಯವಾಗಿ ರಕ್ಷಣೆಗಾಗಿ ಬಾಪ್ತಿಸ್ಮದ ಅಗತ್ಯತೆ ಇಲ್ಲ ಎಂದು ಹೇಳುತ್ತಾರೆ. ನಂಬಿಕೆಯು, ರಕ್ಷಣೆಗಾಗಿ ದೇವರ ಕೇವಲ ಅಗತ್ಯತೆಯಂತೆ, ಮನುಷ್ಯನ ಪರವಾಗಿ ಬೇರೆ ಯಾವುದೂ ಹೊರತು ಪಡಿಸಲ್ಪಟ್ಟಿದೆ ಎಂದು ವಾದಿಸುತ್ತಾರೆ. ಇದನ್ನು ಅವರು ಸಿದ್ಧಾಂತವಾಗಿ ಹೇಳಿದರೂ, ಆದರೆ ಇದನ್ನು ಅವರು ಯಾವಾಗಲೂ ರೂಢಿಸುವದಿಲ್ಲ.

ರಕ್ಷಣೆಯು ನಂಬಿಕೆಯ ಮೇಲೆ ಮಾತ್ರವೇ ಅವಲಂಭಿಸಿದ್ದರೆ, ಆಗ ರಕ್ಷಣೆಗಾಗಿ ಅಗತ್ಯದಂತೆ ಯಾವುದೂ ಬೋಧಿಸಲ್ಪಡುತ್ತಿರಲಿಲ್ಲ. ಅದು ಬೈಬಲ್ ಅಧ್ಯಯನವನ್ನೂ ಬೋಧನೆ ಕೇಳುವುದನ್ನೂ ಮಾನಸಾಂತರವನ್ನೂ ಅರಿಕೆಯನ್ನೂ ಮತ್ತು "ಪಾಪಿಯ ಪ್ರಾರ್ಥನೆ" ಹೇಳುವುದನ್ನೂ ಒಬ್ಬನ ಹೃದಯದೊಳಗೆ ಬರಲು ಕ್ರಿಸ್ತನನ್ನು ಬೇಡಿಕೊಳ್ಳುವದನ್ನೂ[1] ಹೊರತು ಪಡಿಸುತ್ತದೆ. ಇವುಗಳು ಸಾಮಾನ್ಯವಾಗಿ "ನಂಬಿಕೆ ಮಾತ್ರವೇ" ಎಂದು ಬೋಧಿಸುವವರಿಂದ ಕೂಡಿಸಲ್ಪಡಲು ಯೋಚಿಸಲ್ಪಡುತ್ತದೆ. ಬಾಪ್ತಿಸ್ಮವು ಸಹ ಅರ್ಹತೆಯ ಕೃತ್ಯವಲ್ಲದ್ದರಿಂದ ನಂಬಿಕೆಯಲ್ಲಿ ಯಾಕೆ ಕೂಡಿಸಲ್ಪಡಬಾರದು. ಬಾಪ್ತಿಸ್ಮ ಪಡೆಯುವವನು ಕಾರ್ಯಾತ್ಮಕವಾದ ಯಾವುದನ್ನೂ ಮಾಡುವದಿಲ್ಲ, ಆದರೆ ಸುಮ್ಮನೇ ತನ್ನ ದೇಹವು ನೀರಿನೊಳಗೆ ಇಡಲ್ಪಡುವಂತೆಯೂ ಮತ್ತು ನೀರಿನಿಂದ ಹೊರಗೆ ತರಲ್ಪಡುವಂತೆಯೂ ಬಿಡುತ್ತಾನೆ - ಯೇಸುವು ಸಹ ತನ್ನನ್ನು ಶಿಲುಬೆಗೆ ಹಾಕಿದಾಗ ಯಾವುದೇ ಕೆಲಸ ಮಾಡಲಿಲ್ಲ; ತನ್ನನ್ನು ಶಿಲುಬೆಗೆ ನೇತು ಹಾಕಿದವರ ಕೈಗಳಿಗೆ ಕೊಟ್ಟನು. ನಮ್ಮ ಪಾಪಗಳಿಗಾಗಿ ಆತನು ಮರಣ ಪಟ್ಟನಂತರ ಆತನು ಇತರರಿಂದ ಹೂಣಲ್ಪಟ್ಟನು ಮತ್ತು ಆತ್ಮನಿಂದ ಎಬ್ಬಿಸಲ್ಪಟ್ಟನು (ರೋಮಾಪುರ 8:11).

## ವಿಶ್ವಾಸವು ವಿಧೇಯತೆಯನ್ನು ಒಳಗೊಂಡಿರುವುದೋ?

"ನಂಬಿಕೆ" ಮತ್ತು "ನಂಬು" ಇವು *pisteuo*ದ ರೂಪಗಳಿಂದ ಬರುತ್ತದೆ, ಇದನ್ನು "ಭರವಸೆ ಮತ್ತು ಅವಲಂಭನೆಯಂತೆ" ನಿರೂಪಿಸಬಹುದು. ವಿಧೇಯತೆಯಲ್ಲಿ ಪರಿಣಾಮಗೊಳ್ಳುವ, ಒಬ್ಬನ ನಂಬಿಕೆಗೆ ಸಮ್ಮತಿಯುಳ್ಳ ಉತ್ತರವನ್ನು ಸಹ ಒಳಗೊಂಡಿರುತ್ತದೆ. ಆರ್. ಬುಲ್ಟ್‌ಮಾನ್‌ನು *pisteuo*ದ ಈ ನಿರೂಪಣೆಯನ್ನು ಕೊಟ್ಟನು:

> … "ವಿಧೇಯನಾಗಲಿಕ್ಕೆ." ಇಬ್ರಿಯ 11, ನಂಬುವುದು ವಿಧೇಯನಾಗುವುದಾಗಿರುತ್ತದೆ ಎಂಬುದನ್ನು ಒತ್ತಿಹೇಳುತ್ತದೆ, [ಹಳೇ ಒಡಂಬಡಿಕೆಯಲ್ಲಿಯಂತೆ] ರೋಮಾಪುರ 1:8; 1 ಥೆಸಲೊನೀಕ 1:8 (ಹೋಲಿಸು ರೋಮಾಪುರ 15:18; 16:19)ರಲ್ಲಿ ಪೌಲನು, ನಂಬುವುದು ಅಂದರೆ ವಿಧೇಯನಾಗುವುದು ಎಂಬುದನ್ನು ತೋರಿಸುತ್ತಾನೆ. ಅವನು ರೋಮಾಪುರ 1:5ರಲ್ಲಿ ನಂಬಿಕೆಯ ಬಗ್ಗೆ ಮಾತಾಡುತ್ತಾನೆ. ಹೋಲಿಸು 10:3; 2 ಕೊರಿಂಥ 9:13).[2]

"ವಿಶ್ವಾಸ" ಮತ್ತು "ನಂಬಿಕೆ" ಎಂಬವುಗಳು ಮಾನಸಿಕ ಇಲ್ಲವೇ ಭಾವನಾತ್ಮಕ ಉತ್ತರಗಳಿಗಿಂತ ಹೆಚ್ಚಾದದ್ದನ್ನು ಸೂಚಿಸುತ್ತವೆ. ಇವು "ಅವಿಧೇಯನಾಗು," "ಅವಿಧೇಯನು," ಮತ್ತು "ಅವಿಧೇಯತೆ" ಎಂಬವುಗಳಿಗೆ ವಿರುದ್ಧವಾಗಿ ಉಪಯೋಗಿಸಲ್ಪಟ್ಟಿವೆ. ಈ ಪದಗಳು *apeithia*[3] ಎಂಬ ಗ್ರೀಕ ಪದದಿಂದ ಭಾಷಾಂತರಿಸಲ್ಪಟ್ಟಿವೆ. "ಆತನ ಮಗನನ್ನು ನಂಬುವವನಿಗೆ [ಗ್ರೀಕ್: *pisteuo*] ನಿತ್ಯಜೀವವುಂಟು; ಆದರೆ ಮಗನಿಗೆ ವಿಧೇಯನಾಗದೆ [ಗ್ರೀಕ: *apeithio*] ಇರುವವನು ಜೀವವನ್ನು ಕಾಣುವುದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವುದು." ಎಂದು ಯೋಹಾನ 3:36 ಹೇಳುತ್ತದೆ. *Pisteuo* ("ನಂಬುವವನು"), ಸಕಾರಾತ್ಮಕವಾದದ್ದಾಗಿದ್ದದ್ದು *apeitheo* ("ವಿಧೇಯನಾಗದಿರು"), ನಕಾರಾತ್ಮಕವಾದದ್ದರೊಂದಿಗೆ ವಿರೋಧವಾಗಿರುವುದು, "ವಿಶ್ವಾಸ" ಮತ್ತು "ನಂಬಿಕೆ" ಎಂಬ ಪದಗಳಿಂದ ಸೂಚಿಸಲ್ಪಟ್ಟ ಕಾರ್ಯವು ಕೃತಿಗೆ ಪ್ರೇರೇಪಿಸಲ್ಪಟ್ಟಾಗ ಪೂರ್ಣವಾಗುತ್ತದೆಂಬುದಕ್ಕೆ ಸ್ಪಷ್ಟವಾದ ಪುರಾವೆಯಾಗಿದೆ.

ಇಬ್ರಿಯ 3:18, 19ರಲ್ಲಿ ಒಂದು ಹೋಲಿಕೆಯು ಕಂಡು ಬರುತ್ತದೆ: "ನನ್ನ ವಿಶ್ರಾಂತಿಯಲ್ಲಿ ನೀವು ಸೇರುವುದೇ ಇಲ್ಲವೆಂದು ಯಾರನ್ನು ಕುರಿತು ಪ್ರಮಾಣ ಮಾಡಿದನು? ಅವಿಧೇಯರನ್ನು [ಗ್ರೀಕ: *apeithio*] ಕುರಿತು ಅಲ್ಲವೋ? ಅವರು ಸೇರಲಾರದೇ ಹೋದದ್ದು ಅಪನಂಬಿಕೆಯಿಂದಲೇ [ಗ್ರೀಕ: *apisteo*] ಎಂದು ತಿಳಿದು ಕೊಳ್ಳುತ್ತೇವೆ." ಈ ವಾಕ್ಯಭಾಗವು ಜಯಿಸಲು ಕಾನಾನಿನೊಳಗೆ ಹೋಗದೆ ಇರುವುದರಿಂದ ಇಸ್ರಾಯೇಲ್ಯರು ದೇವರಿಗೆ ಅವಿಧೇಯರಾದದ್ದನ್ನು ಉಲ್ಲೇಖಿಸುತ್ತದೆ. "ಅಪನಂಬಿಕೆಯ ಹೃದಯವು" (ಇಬ್ರಿಯ 3:12-15) ಇರಬಾರದೆಂದು ಕ್ರೈಸ್ತರನ್ನು ಎಚ್ಚರಿಸಲು, ಇಸ್ರಾಯೇಲನ್ನು ಒಂದು ಉದಾಹರಣೆಯಂತೆ ಉಪಯೋಗಿಸಲ್ಪಟ್ಟಿದೆ (ಇಬ್ರಿಯ 3:9-11, 16-19). ಇಸ್ರಾಯೇಲ್ಯರಿಗೆ ಕೊಡಲ್ಪಟ್ಟ ಸಂದೇಶವು ಅವರಿಗೆ ಲಾಭಕೊಡಲಿಲ್ಲ, "ಯಾಕಂದರೆ ಅದು ನಂಬಿಕೆಯಿಂದ [ಗ್ರೀಕ: *pistis*] ಐಕ್ಯತೆಗೊಂಡಿರಲಿಲ್ಲ" (ಇಬ್ರಿಯ 4:2). ದೇವರ ಬಹುಮಾನವನ್ನು ಪಡೆಯುವುದರಲ್ಲಿ ಸೋತುಹೋದರು. ಯಾಕಂದರೆ ಅದು ತಮ್ಮನ್ನು ವಿಧೇಯತೆಗೆ ತರುವ ನಂಬಿಕೆಯಾಗಿರಲಿಲ್ಲ. "ಅವಿಧೇಯತೆಯ ಕಾರಣದಿಂದ" [ಗ್ರೀಕ: *apeithia*] ದೇವರ ವಿಶ್ರಾಂತಿಯಲ್ಲಿ ಅವರು ಸೇರದೇ ಹೋದರೆಂದು ಇಬ್ರಿಯ 4:6, 11 ಹೇಳುತ್ತದೆ. ಇಬ್ರಿಯರಿಗೆ ಬರೆದ ಪುಸ್ತಕದ ಲೇಖಕನು, ಅವರ "ಅವಿಧೇಯತೆಯ ಉದಾಹರಣೆಯನ್ನು" [ಗ್ರೀಕ: *apeithia*] ಕ್ರೈಸ್ತರು ಅನುಸರಿಸಬಾರದೆಂದು ಮನವಿ ಮಾಡಿದನು (ಇಬ್ರಿಯ 4:11). ಇಬ್ರಿಯ 4:6, 11ರಲ್ಲಿ KJVಯು *apeithia*ವನ್ನು "ಅವಿಧೇಯತೆ" ಎಂಬುದರ ಬದಲು "ಅವಿಶ್ವಾಸ" ಎಂದು ಮತ್ತು ಯೋಹಾನ 3:36ರಲ್ಲಿ "ನಂಬುವದಿಲ್ಲ" ಎಂಬಂತೆ ಭಾಷಾಂತರಿಸಿದ್ದು ನ್ಯಾಯಬದ್ಧವಾಗಿರುವದಿಲ್ಲ.

ಈ ವಾಕ್ಯಭಾಗಗಳು ವಿಧೇಯತೆ ಇಲ್ಲದೇ ವಿಶ್ವಾಸವು ಅಪೂರ್ಣವಾದದ್ದಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ನಂಬದೇ ಇದ್ದವರು ವಿಧೇಯರಾಗದೆಯಿದ್ದವರಾಗಿದ್ದರು, ವಿಶ್ವಾಸವಿದ್ದವರು ವಿಧೇಯರಾಗಿರುವವರು ಆಗಿದ್ದಾರೆ.

ವಿಧೇಯತೆಗೆ ನಡಿಸಿದ ವಿಶ್ವಾಸವು ಬಹುಮಾನ ಹೊಂದಿದ ವಿಶ್ವಾಸವಾಗಿದೆ.

## ರಕ್ಷಣೆಯು ವಿಶ್ವಾಸ ಮಾತ್ರದಿಂದಲೋ?

ಇನ್ನೊಂದು ಅತಿಯಾದದ್ದನ್ನು, ಒಳ್ಳೇ ಕೆಲಸಗಳ ಮೇಲೆ ಅವಲಂಭಿಸಿದ ರಕ್ಷಣೆಯ ತತ್ವವನ್ನು ಎದುರಿಸಲು "ವಿಶ್ವಾಸ ಮಾತ್ರವೇ" ಎಂಬ ತತ್ವವನ್ನು ಬಹುಶಃ ಮಾರ್ಟಿನ್ ಲೂಥರ್ ರೂಪಿಸಿದನು. ರೋಮಾಪುರ 3:28ರ ತನ್ನ ಭಾಷಾಂತರದಲ್ಲಿ "ವಿಶ್ವಾಸ"ದ ನಂತರ "ಮಾತ್ರವೇ" ಎಂಬ ಪದವನ್ನು ಸೇರಿಸಿದನು. ಇದು ಹೆಚ್ಚಾದ ಪ್ರೊಟೆಸ್ಟಂಟ್ ಸಭೆಗಳ ಅಸ್ತಿವಾರ ಬೋಧನೆಯಾಗಿದೆ. *The Book of Discipline,* ಒಂದು ಸಭಾಪಂಗಡದ ಮತಾಭಿಪ್ರಾಯ ಪುಸ್ತಕವು ಹೀಗೆ ಹೇಳುತ್ತದೆ: "ಆದುದರಿಂದ, ನಂಬಿಕೆ ಮಾತ್ರದಿಂದಲೇ ನಾವು ನೀತಿವಂತರೆಂದು ಎಣಿಸಲ್ಪಡುವುದು ಅತಿಯಾಗಿ ಪರಿಪೂರ್ಣವಾದ ತತ್ವವಾಗಿದೆ, ಮತ್ತು ಆದರಣೆಯನ್ನು ತುಂಬಿಕೊಂಡದ್ದಾಗಿದೆ."[4]

"ಕೆಲಸಗಳು ಮಾತ್ರವೇ" ಇಲ್ಲವೇ "ವಿಶ್ವಾಸ ಮಾತ್ರವೇ" ಎಂಬುದನ್ನಲ್ಲ, ಆದರೆ "ಪ್ರೀತಿಯ ಮುಖಾಂತರ ಕಾರ್ಯಮಾಡುವ ವಿಶ್ವಾಸವನ್ನು" ಬೈಬಲ್ ಬೋಧಿಸುತ್ತದೆ. (ಗಲಾತ್ಯ 5:6) ಇಬ್ರಿಯ 11:6ರಲ್ಲಿ ಈ ಸತ್ಯವು ಹೇಳಲ್ಪಟ್ಟಿದೆ: "ಆದರೆ ವಿಶ್ವಾಸವಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ."[5] ದೇವರು ಅಸ್ತಿತ್ವದಲ್ಲಿ ಇರುವನೆಂಬುದನ್ನು ನಾವು ನಂಬುವ ಅಗತ್ಯತೆ ಇರುವದಲ್ಲದೇ ಆತನನ್ನು ಸಂತೋಷಪಡಿಸಲಿಕ್ಕಾಗಿ "ಆತನನ್ನು ಹುಡುಕತಕ್ಕದ್ದು." "ಹುಡುಕುವುದು" ಮಾನವನ ಪ್ರಯತ್ನವನ್ನು ಸೂಚಿಸುತ್ತದೆ.

ದೆವ್ವಗಳೂ ಕೂಡ ಹೆದರಿ ನಡುಗುವಷ್ಟು ನಂಬುತ್ತವೆ ಎಂದು ಯಾಕೋಬನು ತೋರಿಸಿದನು (ಯಾಕೋಬ 2:19). "ಹಾಗೆಯೇ ಕ್ರಿಯೆಗಳಿಲ್ಲದಿದ್ದರೆ ವಿಶ್ವಾಸವು ತನ್ನಲ್ಲಿ ಜೀವವಿಲ್ಲದ್ದು" ಎಂದು ಅವನು ಹೇಳಿದನು (ಯಾಕೋಬ 2:17; ವಚನ 20, 26ನ್ನೂ ಸಹ ನೋಡಿರಿ). ದೇವರ ದೃಷ್ಟಿಯಲ್ಲಿ ನೀತಿವಂತರೆಂದು ಎಣಿಸಲ್ಪಡುವುದು ಕೇವಲ ವಿಶ್ವಾಸದ ಮುಖಾಂತರ ಬರುವದಿಲ್ಲ; "ಮನುಷ್ಯನು ಕ್ರಿಯೆಗಳಿಂದ ನೀತಿ ವಂತನೆಂದು ನಿರ್ಣಯಿಸಲ್ಪಡುತ್ತಾನೇ ಹೊರತು ಬರೀ ವಿಶ್ವಾಸದಿಂದಲ್ಲ" (ಯಾಕೋಬ 2:24).

ಯೇಸುವಿನಲ್ಲಿ ನಂಬಿಕೆಯಿಡುವುದು ಮಹತ್ವದ್ದಾಗಿದೆ ಯಾಕಂದರೆ ಯೇಸುವಿಗೆ ವಿಧೇಯನಾಗುವುದು ಆತನಲ್ಲಿ ವಿಶ್ವಾಸವಿಡುವದರ ಮೂಲಕವಾಗಿ ಮಾತ್ರವೇ ಬರುವುದು (ಯೋಹಾನ 3:36). ಒಬ್ಬ ವ್ಯಕ್ತಿಯು ಮನೆಯಿಂದ ದೂರದಲ್ಲಿರುವ ಒಂದು ಪ್ರದೇಶದಲ್ಲಿ ತನ್ನ ಸ್ನೇಹಿತರನ್ನು ಸಂದರ್ಶಿಸಲಿಕ್ಕೆ ಹೋದನು, ಅವನು ಅಸ್ವಸ್ಥನಾದನು ತಾನು ಯಾವ ಡಾಕ್ಟರನನ್ನು ನಂಬಬೇಕು ಎಂದು ತಿಳಿಯದೇ ಇದ್ದುದರಿಂದ ಡಾಕ್ಟರರ ಬಳಿಗೆ ಹೋಗುವದನ್ನು ನಿರಾಕರಿಸಿದನು. ಅವನ ಸ್ನೇಹಿತರು ಅವನಿಗೆ ಒಬ್ಬ ಡಾಕ್ಟರನನ್ನು ಶಿಫಾರಸು ಮಾಡಿದಾಗ, ಅವನು ಅವನಲ್ಲಿ ನಂಬಿಕೆಯಿಟ್ಟಿದ್ದರಿಂದ ಅವನ ಬಳಿಗೆ ಹೋದನು ಅವನು ಹೇಳಿದ ಔಷಧವನ್ನು ಸಂತೋಷದಿಂದ ತೆಗೆದುಕೊಂಡನು. ಯೇಸುವಿನಲ್ಲಿ ನಂಬಿಕೆಯಿಡುವವರ ಬಗೆಗೂ ಇದು ಸತ್ಯವಾಗಿರುತ್ತದೆ. ಆತನನ್ನು ನಂಬುವವರು ಆತನಿಗೆ ವಿಧೇಯರಾಗುವರು (ಮತ್ತಾಯ 7:24-27), ಮತ್ತು ಹೀಗೆ ನಿತ್ಯವಾದ ರಕ್ಷಣೆಯನ್ನು ಸ್ವೀಕರಿಸಿಕೊಳ್ಳುವರು (ಇಬ್ರಿಯ 5:9).

## ರಕ್ಷಣೆಯು ಕೃತ್ಯಗಳಿಂದಲೋ?

"ವಿಶ್ವಾಸ ಮಾರ್ಗ" ಮತ್ತು "ಕರ್ಮ ಮಾರ್ಗ" ಎಂಬವುಗಳನ್ನು ಕುರಿತು ತಮ್ಮ ಬೋಧನೆಯಲ್ಲಿ ಪೌಲ ಮತ್ತು ಯಾಕೋಬ ವಿರೋಧದಲ್ಲಿದ್ದಾರೆಂದು ಕೆಲವರು ಹೇಳುತ್ತಾರೆ (ರೋಮಾಪುರ 3:28; ಯಾಕೋಬ 2:24). ಪೌಲ ಮತ್ತು ಯಾಕೋಬರು ಒಂದೇ ರೀತಿಯ ಕೃತ್ಯಗಳ ಬಗ್ಗೆ ಬರೆಯುತ್ತಿದ್ದರೆ, ನಾವು ನಿರಾಶೆಯ ವಿರೋಧವನ್ನು ಕಂಡುಕೊಳ್ಳಬಹುದು. ಹೀಗಿದ್ದರೂ, ಪೌಲನು ನೀತಿನಿರ್ಣಯ ಹೊಂದುವದಕ್ಕಾಗಿ ಸಾಧನೆಮಾಡುವ ಕಾರ್ಯಗಳ ಬಗ್ಗೆ ಬರೆಯುತ್ತಿದ್ದನು, ಯಾಕೋಬನು ನೀತಿನಿರ್ಣಯವನ್ನು ಒದಗಿಸಲು ಯೇಸು ಮಾಡಿದವುಗಳ ಮೇಲಿರುವ ನಂಬಿಕೆಯನ್ನು ಅವಲಂಭಿಸಿರುವ ಕಾರ್ಯಗಳನ್ನು ಕುರಿತು ಬರೆಯುತ್ತಿದ್ದನು.

ಈ ಎರಡು ರೀತಿಯ ಕಾರ್ಯಗಳ ಒಂದು ಒಳ್ಳೇ ಉದಾಹರಣೆಯು ಯೆರಿಕೋವಿನ ಗೋಡೆಗಳ ನಾಶನದಲ್ಲಿ ಕಂಡುಬರುತ್ತದೆ. ಗೋಡೆಗಳು ಬೀಳುವದಕ್ಕೆ ಯಾವುದು ಕಾರಣ? ದೇವರ ಕಾರ್ಯ ಮತ್ತು ಆತನ ಕಾರ್ಯ ಮಾತ್ರವೇ ಆಗಿತ್ತು. ಇಸ್ರಾಯೇಲ್ಯರು ಸುತ್ತಿದ್ದರಿಂದ ಇಲ್ಲವೇ ಆರ್ಭಟಿಸಿದ್ದರಿಂದ ಅವು ಕುಸಿದು ಬೀಳಲು ಕಾರಣವಾಗಲಿಲ್ಲ. ಇಸ್ರಾಯೇಲ್ಯರ ಕೆಲಸದ ಮೇಲೆ ಅವಲಂಭಿಸಿ ಗೋಡೆಗಳು ಬಿದ್ದು ಹೋಗಿದ್ದರೆ, ಗೋಡೆಗಳು ಬಿದ್ದು ಹೋಗಲು ಜನರು ಭಾರದ ಸುತ್ತಿಗೆ, ಹಾರಿ, ಸಲಿಕೆಗಳನ್ನು ಉಪಯೋಗಿಸಿದ್ದಿರಬೇಕಾಗಿತ್ತು. "ಇದು ಕೆಲಸಗಳಿಂದಾದದ್ದಲ್ಲ, ಆದುದರಿಂದ ಯಾರೂ ಹೊಗಳಿಕೊಳ್ಳಬೇಕಾಗಿರುವದಿಲ್ಲ" (ಎಫೆಸ 2:9) ಎಂದು ಪೌಲನು ಬರೆದಾಗ ಇಂಥ ರೀತಿಯ ಕಾರ್ಯದ ಅರ್ಥವುಳ್ಳವನಾಗಿದ್ದನು.

"ವಿಶ್ವಾಸದಿಂದಲೇ ಅವರು ಏಳು ದಿವಸಗಳ ತನಕ ಎರಿಕೋ ಪಟ್ಟಣದ ಗೋಡೆಗಳನ್ನು ಸುತ್ತಿದ ಮೇಲೆ ಅವು ಬಿದ್ದವು" (ಇಬ್ರಿಯ 11:30). ಇಸ್ರಾಯೇಲ್ಯರ ಚಟುವಟಿಕೆಯು, ವಿಶ್ವಾಸವನ್ನು ಅವಲಂಭಿಸಿದ ಅವರ ಚಟುವಟಿಕೆಯನ್ನು ಯಾಕೋಬನು ಚರ್ಚಿಸುತ್ತಿದ್ದ ಕಾರ್ಯಗಳ ಒಂದು ಉದಾಹರಣೆಯಾಗಿದೆ. ಅವರ ಕೃತ್ಯವು ದೇವರು ಮಾಡುವೆನೆಂದು ವಾಗ್ದಾನ ಮಾಡಿದ್ದರ ಮೇಲೆ ಅವಲಂಭಿಸಿದ ಉತ್ತರವಾಗಿತ್ತು, ಆದರೆ ಅವರು ಮಾಡಬಹುದಾದ್ದರ ಮೇಲೆ ಅವಲಂಭಿಸಿರಲಿಲ್ಲ.

ಬಾಪ್ತಿಸ್ಮವನ್ನು ಆಶೀರ್ವಾದಗಳನ್ನು ಉತ್ಪಾದಿಸುವ ಕೃತಿಗಳ ವರ್ಗದಲ್ಲಿ ಇಡಲಿಕ್ಕಾಗದು. ವಿಶ್ವಾಸ, ಮಾನಸಾಂತರ ಮತ್ತು ಅರಿಕೆಗಳಂತೆ ಪಾಪಗಳನ್ನು ತೆಗೆದು ಹಾಕುವ ಸಹಜವಾದ ಸಾಮರ್ಥ್ಯವು ಬಾಪ್ತಿಸ್ಮಕ್ಕೆ ಇರುವದಿಲ್ಲ. ಬಾಪ್ತಿಸ್ಮವು ಸ್ವಯಂ - ಸಾಧನೆಯ ಕಾರ್ಯವಾಗಿದ್ದರೆ, ಆಗ ರಕ್ಷಣೆ ಮತ್ತು ಪಾಪಗಳ ಕ್ಷಮಾಪಣೆಯೊಂದಿಗೆ ಮಾಡಬೇಕಾದದ್ದನ್ನು ಹೊರಗಿಡಬೇಕಾಗುತಿತ್ತು. ಪಾಪಗಳನ್ನು ತೆಗೆದು ಹಾಕುವ ಶಕ್ತಿಯು ನೀರಿನಲ್ಲಿ, ಬಾಪ್ತಿಸ್ಮ ಮಾಡಿಸುವವನ ಕಾರ್ಯದಲ್ಲಿ ಇಲ್ಲವೇ ಬಾಪ್ತಿಸ್ಮ ಹೊಂದುವವನ ವಶವಾಗುವಿಕೆಯಲ್ಲಿ ಇರುವದಿಲ್ಲ. ಯೇಸುವಿನ ರಕ್ತದಲ್ಲಿ ಮಾತ್ರವೇ ಆ ಶಕ್ತಿ ಇರುವುದು (ಮತ್ತಾಯ 26:28; ಇಬ್ರಿಯ 9:22). ಯೆರಿಕೋವಿನ ಗೋಡೆಗಳನ್ನು ಕುರಿತ ಇಸ್ರಾಯೇಲ್ಯರ ಚಟುವಟಿಕೆಯೊಂದಿಗೆ ಇದ್ದಂತೆ, ಬಾಪ್ತಿಸ್ಮದೊಂದಿಗೂ ಇರುವುದು: ಒಳಗೊಂಡಿರುವವರ ಕಾರ್ಯದಲ್ಲಿ ಇಲ್ಲವೇ ಕೃತ್ಯಗಳಲ್ಲಿ ಯಾವುದೂ ಅಪೇಕ್ಷಿತ ಆಶೀರ್ವಾದವನ್ನು ಉತ್ಪಾದಿಸಲಾರದು.

ದೇವರು ತನ್ನ ವಾಗ್ದಾನದಲ್ಲಿ ಅವರ ವಿಶ್ವಾಸವು ಆತನ ನಿರ್ದೇಶನಕ್ಕೆ ಉತ್ತರಕೊಡಲು ನಡಿಸುವವರೆಗೆ ಇಸ್ರಾಯೇಲ್ಯರನ್ನು ಆಶೀರ್ವದಿಸಲಿಲ್ಲ. ಆತನು ಬಹುಮಾನ ಕೊಡುವನೆಂಬ ವಿಶ್ವಾಸದ ಒಂದು ಉದಾಹರಣೆಯಾಗಿ ದೇವರು ಇದನ್ನು ಕೊಟ್ಟನು (ಇಬ್ರಿಯ 11:30).

ಬಾಪ್ತಿಸ್ಮದ ಕಾರ್ಯವು ಇದಕ್ಕೆ ಸಂಬಂಧಿಸಿರುತ್ತದೆ. "ನೀವು ಬಾಪ್ತಿಸ್ಮದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟಿರಿ ... ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ" (ಕೊಲೊಸ್ಸೆ 2:12) ಎಂದು ಪೌಲನು ಬರೆದನು, ಅದೇ ರೀತಿಯಲ್ಲಿ ದೇವರ ಚಿತ್ತಕ್ಕೆ ಜನರ ನಂಬಿಕೆ ಮತ್ತು ವಿಧೇಯತೆಯ ಉತ್ತರದ ಕಾರಣದಿಂದ ಗೋಡೆಗಳು ಬೀಳುವಂತೆ ಮಾಡಿದ್ದರಿಂದ ಇಸ್ರಾಯೇಲ್ಯರಿಗೆ ದೇವರು ಉತ್ತರಕೊಟ್ಟನು. ಅವರ ಸುತ್ತುವಿಕೆಗೆ, ಆರ್ಭಟಿಸುವಿಕೆಗೆ ಮತ್ತು ಟಗರಿನ ಕೊಂಬುಗಳನ್ನು ಊದುವಿಕೆಗೆ ದೇವರು ಬಹುಮಾನಿಸಿದಂತೆಯೇ (ಯೆಹೋಶುವ 6:1-20), ದೇವರೂ ಸಹ ಬಾಪ್ತಿಸ್ಮದಲ್ಲಿ ಯೇಸುವಿನೊಂದಿಗೆ ಹೂಣಲ್ಪಡುವಾಗ ನಮ್ಮ ಪಾಪಗಳನ್ನು ತೆಗೆದು ಹಾಕಲು ದೇವರ ಕಾರ್ಯದಲ್ಲಿ ನಮ್ಮ ನಂಬಿಕೆಯ ಕಾರಣದಿಂದ ನಮ್ಮ ಪಾಪಗಳನ್ನು ಕ್ಷಮಿಸುವನು (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 2:38; 22:16; ಕೊಲೊಸ್ಸೆ 2:12, 13).

ಇಸ್ರಾಯೇಲ್ಯರ ಕೃತ್ಯಗಳಲ್ಲಿ ಬಹುಮಾನ ಉತ್ಪಾದಿಸಲು ಯಾವುದೇ ಸ್ವಯಂ ಚಾಲಿತ ಶಕ್ತಿಯಿರಲಿಲ್ಲ, ಮತ್ತು ನಾವು ಬಾಪ್ತಿಸ್ಮ ಹೊಂದುವದರಲ್ಲಿ ನಮ್ಮನ್ನು ರಕ್ಷಿಸಲು ಯಾವುದೇ ಸ್ವಯಂ ಸಾಮರ್ಥ್ಯವಿರಲಿಲ್ಲ. ಅವರು ಮಾಡಿದ ಯಾವುದೇ ಕಾರ್ಯದ ಮುಖಾಂತರ ಅವರ ಆಶೀರ್ವಾದವು ಸಾಧಿಸಲ್ಪಡಲಿಲ್ಲ, ಮತ್ತು ನಮ್ಮ ಆಶೀರ್ವಾದವು ನಾವು ಮಾಡುವ ಯಾವುದೇ ಸಂಗತಿಯಿಂದ ತರಲ್ಪಡುವದಿಲ್ಲ. ಹೀಗಿದ್ದರೂ, ಇಸ್ರಾಯೇಲ್ಯರು ದೇವರು ಮಾಡುವೆನೆಂದು ವಾಗ್ದಾನ ಮಾಡಿದ್ದನ್ನು ವಿಧೇಯತೆಯಲ್ಲಿ ವ್ಯಕ್ತಪಡಿಸುವವರೆಗೆ ಬಹುಮಾನಿಸಲ್ಪಡಲಿಲ್ಲ; ಹಾಗೆಯೇ ದೇವರು ಏನನ್ನು ವಾಗ್ದಾನ ಮಾಡಿದ್ದಾನೋ ಅದರಲ್ಲಿ ನಮ್ಮ ನಂಬಿಕೆಯನ್ನು ಬಾಪ್ತಿಸ್ಮದಲ್ಲಿ ವ್ಯಕ್ತಪಡಿಸುವವರೆಗೆ ನಮಗೆ ಬಹುಮಾನ ದೊರೆಯುವದಿಲ್ಲ. ನಾವು ನಮ್ಮ ಕಾರ್ಯಗಳಿಂದ ರಕ್ಷಿಸಲ್ಪಡುವದಿಲ್ಲ. ನಾವು ಮಾಡುವ ಯಾವುದರಿಂದಲೂ ನಮ್ಮ ರಕ್ಷಣೆಯನ್ನು ಸಂಪಾದಿಸಲಾರೆವು, ಯಾಕಂದರೆ ಅದು ಶಿಲುಬೆಯ ಮೇಲೆ ಯೇಸುವಿನಿಂದ ಸಾಧಿಸಲ್ಪಟ್ಟಿತು. ಶಿಲುಬೆಯ ಮೇಲೆ ಆತನ ಮರಣದಿಂದ ಉತ್ಪಾದಿಸಲ್ಪಟ್ಟ ಕ್ಷಮಾಪಣೆಯನ್ನು ನಂಬಿಕೆಯಿಂದ ಸ್ವೀಕರಿಸಲು ಪ್ರೇರೇಪಿಸಲ್ಪಟ್ಟ ಕೃತ್ಯದಿಂದ ನಾವು ರಕ್ಷಿಸಲ್ಪಟ್ಟಿದ್ದೇವೆ.

ಬಾಪ್ತಿಸ್ಮವು ನಾವು ಮಾಡುವ ಒಂದು ಕಾರ್ಯವಾಗಿರುವದಿಲ್ಲ - ನಮಗೆ ನಾವೇ ಮುಳುಗೇಳಿಸಿಕೊಳ್ಳುವ ಬದಲು, ನಮ್ಮನ್ನು ನೀರಿನಲ್ಲಿ ಹೂಣಿಡಲು ನಾವು ಇನ್ನೊಬ್ಬನಿಗೆ ಒಪ್ಪಿಸಿಕೊಳ್ಳುತ್ತೇವೆ. ಯಾವುದೇ ಅರ್ಥದಲ್ಲಿ ಬಾಪ್ತಿಸ್ಮವು ನಾವು ಮಾಡುವಂಥ ಸಂಗತಿಯಾಗಿರುವದಿಲ್ಲ; ನಮಗೆ ಮಾಡಲ್ಪಡುವ ಒಂದು ಸಂಗತಿಯಾಗಿರುತ್ತದೆ. ಬಾಪ್ತಿಸ್ಮದಲ್ಲಿ ನಮ್ಮ ಪಾಪಗಳನ್ನು ತೆಗೆದು ಹಾಕಲು ದೇವರು ಕಾರ್ಯಮಾಡುತ್ತಿರುವನೆಂದು ನಾವು ನಂಬುವದರಿಂದ ನಾವು ಬಾಪ್ತಿಸ್ಮಕ್ಕೆ ಒಪ್ಪಿಸಿಕೊಡುತ್ತೇವೆ (ಕೊಲೊಸ್ಸೆ 2:12, 13), ಮತ್ತು ನಮ್ಮ ಪಾಪಗಳನ್ನು ಕ್ಷಮಿಸಲು ಬಾಪ್ತಿಸ್ಮಕ್ಕೆ ಯಾವುದೇ ಸಹಜವಾದ ಸಾಮರ್ಥ್ಯವಿದೆ ಎಂಬ ಕಾರಣದಿಂದ ಅಲ್ಲ. ಹತ್ತೊಂಭತ್ತನೆಯ ಶತಮಾನದಲ್ಲಿಯ ರಿಸ್ಟೊರೇಶನ್ ಮೂವ್ಮೆಂಟದಲ್ಲಿ ಒಬ್ಬ ನಾಯಕನಾಗಿದ್ದ, ಅಲೆಕ್ಸಾಂಡರ್ ಕಾಂಬೆಲ್, ಹೀಗೆ ಬರೆದಿದ್ದಾರೆ,

> ಸತ್ತ ಜನರು ತಮ್ಮನ್ನು ತಾವೇ ಹೂಣಿಟ್ಟುಕೊಳ್ಳುವದಿಲ್ಲ ಇಲ್ಲವೇ ಜೀವಕ್ಕೆ ಪುನಃ ತಮ್ಮನ್ನು ತಾವೇ ಎಬ್ಬಿಸಿಕೊಳ್ಳುವದಿಲ್ಲ. ಬಾಪ್ತಿಸ್ಮದಲ್ಲಿ ನಮ್ಮ ಒಪ್ಪಿಗೆಯನ್ನು ಕೊಡುವದನ್ನು ಬಿಟ್ಟು ಪ್ರತಿಯೊಂದರಲ್ಲಿಯೂ ನಿಷ್ಕ್ರಿಯರಾಗಿರುತ್ತೇವೆ. ಬೇರೊಬ್ಬನಿಂದ ನಾವು ಹೂಣಿಸಲ್ಪಡುತ್ತೇವೆ ಮತ್ತು ಎಬ್ಬಿಸಲ್ಪಡುತ್ತೇವೆ. ಆದುದರಿಂದ,

> ಯಾವುದೇ ದೃಷ್ಟಿಕೋನದಲ್ಲಿ ಬಾಪ್ತಿಸ್ಮವು ಒಳ್ಳೆಯ ಕಾರ್ಯ ಎಂದು ಕರೆಯಲ್ಪಡುವದಿಲ್ಲ. ಆದುದರಿಂದ, ನಮ್ಮ ಆತ್ಮಿಕ ಸಂಬಂಧಗಳ ಮೇಲೆ ಬಾಪ್ತಿಸ್ಮದ ಯಾವುದೇ ಪ್ರಭಾವವಿದ್ದರೂ, ಅದು ನಮ್ಮ ಸ್ವಂತ ಕಾರ್ಯದಲ್ಲಿ ಇರುವ ಯಾವುದೇ ಅರ್ಹತೆಯ ಕಾರಣದಿಂದಲ್ಲ; ಒದಗಿಸುವ ಕಾರಣದಂತೆಯೂ ಅಲ್ಲ; ಆದರೆ ಕೇವಲ ಒಂದು ಸಾಧನವಾದ ಮತ್ತು ಒಪ್ಪಿಕೊಳ್ಳುವ ಕಾರಣದಂತೆ, ಇದರಿಂದ ನಾವು "ಕ್ರಿಸ್ತನನ್ನು ಧರಿಸಿಕೊಳ್ಳುತ್ತೇವೆ," ಮತ್ತು ಸಾಮಾನ್ಯವಾಗಿ ಹಾಗೆಯೇ ಹೃದಯದಲ್ಲಿ ಆತನೊಂದಿಗೆ ಐಕ್ಯಗೊಳ್ಳುತ್ತೇವೆ, ಆತನೊಂದಿಗೆ ಒಡಂಬಡಿಕೆಯಲ್ಲಿ ಪ್ರವೇಶಿಸುತ್ತೇವೆ, ಮತ್ತು ಆತನ ಮರಣದಲ್ಲಿ, ಹೂಣಿಡುವಿಕೆಯಲ್ಲಿ ಹಾಗೂ ಪುನರುತ್ಥಾನದಲ್ಲಿ ನಮ್ಮನ್ನು ಒಂದಾಗಿಸಿಕೊಳ್ಳು ತ್ತೇವೆ. ಆದುದರಿಂದ ಅಪೊಸ್ತಲನು ಹೀಗೆ ಹೇಳಿದನು, "ನಿಮ್ಮಲ್ಲಿ ಕ್ರಿಸ್ತನಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡವರೆಲ್ಲರೂ ಆತನ ಮರಣದಲ್ಲಿ ಬಾಪ್ತಿಸ್ಮ ಹೊಂದಿದ್ದೀರಿ" - "ಕ್ರಿಸ್ತನನ್ನು ಧರಿಸಿಕೊಂಡಿರುವಿರಿ."[6]

## ವಿಶ್ವಾಸವು ಬಾಪ್ತಿಸ್ಮದೊಂದಿಗೆ ಸಂಬಂಧಿಸಿದೆಯೋ?

ಬಾಪ್ತಿಸ್ಮವು ವಿಶ್ವಾಸದಿಂದ ಬೇರ್ಪಡಿಸಲ್ಪಟ್ಟರೆ, ಆಗ ರಕ್ಷಣೆಗಾಗಿ ಬಾಪ್ತಿಸ್ಮದ ಅವಶ್ಯಕತೆಯಿರುವದಿಲ್ಲ; ಯಾಕಂದರೆ ರಕ್ಷಣೆಯು ವಿಶ್ವಾಸದ ಮೇಲೆ ಅವಲಂಭಿಸಿರುತ್ತದೆ. ಹೀಗಿದ್ದರೂ, ಬೈಬಲು ಬಾಪ್ತಿಸ್ಮವನ್ನು ಬೇರ್ಪಡಿಸದೇ ವಿಶ್ವಾಸದೊಂದಿಗೆ ಸಂಬಂಧಿಸಿರುತ್ತದೆ (ಮಾರ್ಕ 16:16; ಅಪೊಸ್ತಲರ ಕೃತ್ಯಗಳು 8:12, 13; 18:8; ಗಲಾತ್ಯ 3:26, 27; ಕೊಲೊಸ್ಸೆ 2:12). ಈ ವಿಷಯದ ಮೇಲೆ ನ್ಯೂ ಜೆರೂಸಲೇಮ್ ಬೈಬಲ್ ಸರಿಯಾಗಿರುತ್ತದೆ:

> ಬಾಪ್ತಿಸ್ಮವು ವಿಶ್ವಾಸದೊಂದಿಗೆ ವಿರೋಧವಾಗಿರುವದಿಲ್ಲ ಆದರೆ ಅದರೊಂದಿಗೆ ಹೋಗುತ್ತದೆ ... ಮತ್ತು ಬಾಪ್ತಿಸ್ಮದ ಆಚರಣೆಯು ಕಾರ್ಯಾಚರಣೆಯ ಸಂಕೇತ ದಿಂದ ಬಾಹ್ಯ ವ್ಯಕ್ತಪಡಿಸುವಿಕೆಯನ್ನು ಕೊಡುತ್ತದೆ. ಈ ಕಾರಣದಿಂದ ಪೌಲನು ನಂಬಿಕೆಗೆ ಮತ್ತು ಬಾಪ್ತಿಸ್ಮಕ್ಕೆ ಅದೇ ಪರಿಣಾಮಗಳನ್ನು ಆರೋಪಿಸುತ್ತದೆ (ಹೋಲಿಸು ರೋಮಾಪುರ 6:3-9 ಮತ್ತು ಗಲಾತ್ಯ 2:16-20).[7]

ರೋಮಾಪುರ 6ನ್ನು ವ್ಯಾಖ್ಯಾನಿಸುವಲ್ಲಿ, Douglas Moo ಹೀಗೆ ಬರೆದನು, "ವಿಶ್ವಾಸವು ಯಾವಾಗಲೂ ಬಾಪ್ತಿಸ್ಮಕ್ಕೆ ನಡಿಸುವುದೆಂದು ತಿಳಿಯಲ್ಪಟ್ಟಂತೆ, ಬಾಪ್ತಿಸ್ಮವು ಯಾವಾಗಲೂ ತನ್ನ ಅರ್ಹತೆಗೆ ವಿಶ್ವಾಸವನ್ನು ತೆಗೆದುಕೊಳ್ಳುತ್ತದೆ. ವಚನ 3-4ರಲ್ಲಿ ಬಾಪ್ತಿಸ್ಮವು ಇಡೀ ಮಾರ್ಪಡುವಿಕೆಯ ಪ್ರಾರಂಭಿಸುವಿಕೆಯ ಅನುಭವವಾಗಿ ನಿಲ್ಲುತ್ತದೆ, ನಂಬಿಕೆಯನ್ನು ಮತ್ತು ಆತ್ಮನ ವರವನ್ನು ಮುಂದಾಗಿ ತಿಳಿದುಕೊಂಡಿರುತ್ತದೆ ಎಂಬುದನ್ನು ಕಲ್ಪಿಸುತ್ತದೆ."[8]

ಅದೇ ರೀತಿಯಲ್ಲಿ, ದೇವರ ಆಶೀರ್ವಾದಗಳು ವಿಶ್ವಾಸದಿಂದ ಪರಿಣಾಮಗೊಳ್ಳುತ್ತದೆ - ಆದರೆ ಯೋಗ್ಯವಾದ ಕಾರ್ಯವು ತೆಗೆದುಕೊಳ್ಳಲ್ಪಟ್ಟ ನಂತರವೇ ಪರಿಣಾಮಗೊಳ್ಳುತ್ತದೆ. ಹೇಬೇಲನು ಸರಿಯಾದ ಯಜ್ಞವನ್ನು ಅರ್ಪಿಸಿದನು, ನೋಹನು ನಾವೆಯನ್ನು ಕಟ್ಟಿದನು, ಅಬ್ರಹಾಮನು ದೇವರಿಗೆ ವಿಧೇಯನಾದನು, ಮತ್ತು ಇಸ್ರಾಯೇಲ್ಯರು ಯೆರಿಕೋವಿನ ಸುತ್ತ ಸುತ್ತಿದರು (ಇಬ್ರಿಯ 11:4-8, 30). ಹಾಗೆಯೇ ರಕ್ಷಣೆಯು ವಿಶ್ವಾಸಕ್ಕೆ ಹೊರಿಸಲ್ಪಟ್ಟಿದೆ - ಆದರೆ ಬಾಪ್ತಿಸ್ಮದ ನಂತರ ಮಾತ್ರವೇ (ಮಾರ್ಕ 16:16; 1 ಪೇತ್ರ 3:21). ಬೈಬಲಿನಲ್ಲಿ ಕಾರ್ಯಮಾಡಲಿಕ್ಕೆ ದೇವರಿಂದ ಹೇಳಲ್ಪಟ್ಟಾಗ, ದೇವರ

ವಾಕ್ಯಕ್ಕೆ ವಿಶ್ವಾಸದಿಂದ ಪ್ರತ್ಯುತ್ತರ ಕೊಡದೆಯಿರುವಾಗ ಯಾವನಿಗೂ ಯಾವದೇ ಆಶೀರ್ವಾದಗಳೂ ಕೊಡಲ್ಪಡಲಿಲ್ಲ. ದೇವರು ಕೃತ್ಯವನ್ನು ಆಜ್ಞಾಪಿಸಿದಾಗ, ಆತನಿಗೆ ಯಾವಾಗಲೂ ಆತನು ವಾಗ್ದಾನ ಮಾಡಿದ ಆಶೀರ್ವಾದವನ್ನು ಕೊಡುವ ಮೊದಲು ಕೃತ್ಯಕ್ಕೆ ನಡಿಸಿದ ವಿಶ್ವಾಸದ ಅವಶ್ಯಕತೆಯಿತ್ತು. ಒಬ್ಬನು ಬಾಪ್ತಿಸ್ಮ ಹೊಂದುತ್ತಿರುವಾಗ ದೇವರು ವಾಗ್ದಾನ ಮಾಡಿದ ಪಾಪಗಳು ಕ್ಷಮಾಪಣೆಯಲ್ಲಿ ನಂಬಿಕೆಯಿರುವುದು ಒಂದು ಪ್ರಮಾಣವಾಗಿದೆ: ಅದು ಬೈಬಲಿನ ವಿಶ್ವಾಸಕ್ಕೂ ಹೊರತಾದದ್ದಾಗಿರುವದಿಲ್ಲ.

## ಸಾರಾಂಶ

ದೇವರು ಬಹುಮಾನ ಕೊಡುತ್ತಾನೆ ಎಂಬ ನಂಬಿಕೆಯು ಆತನ ಚಿತ್ತಕ್ಕೆ ಉತ್ತರ ಕೊಡಲು ನಮ್ಮನ್ನು ಪ್ರೇರೇಪಿಸುವ ಆತನಲ್ಲಿಯ ನಂಬಿಕೆಯಾಗಿದೆ. ಒಬ್ಬನು ಬಾಪ್ತಿಸ್ಮ ಹೊಂದುತ್ತಿರುವಾಗ ದೇವರ ಕಾರ್ಯದಲ್ಲಿಯ ನಂಬಿಕೆಯು, ಪಾಪಗಳ ಕ್ಷಮಾಪಣೆಯೊಂದಿಗೆ ದೇವರು ಕೊಡುವ ಬಹುಮಾನವಾಗಿದೆ. ನಂಬಿಕೆಯಿಲ್ಲದೆ, ಮಾನವನ ಯಾವುದೇ ಕೃತ್ಯವು ದೇವರಿಗೆ ಮೆಚ್ಚಿಕೆಯಾದದ್ದಾಗಿರುವದಿಲ್ಲ (ಇಬ್ರಿಯ 11:6); ಆದುದರಿಂದ ಬಾಪ್ತಿಸ್ಮವು ನಂಬಿಕೆಯೊಂದಿಗೆ ಜೊತೆಯಾಗಿರುವಾಗ ಮಾತ್ರವೇ ದೇವರ ದೃಷ್ಟಿಯಲ್ಲಿ ಬೆಲೆಯುಳ್ಳದ್ದಾಗಿದೆ.

ಯೇಸುವು ನಮ್ಮ ಪಾಪಗಳಿಗಾಗಿ ಮರಣಹೊಂದಿದನು ಎಂಬ ಸುವಾರ್ತೆಯನ್ನು ನಾವು ನಂಬಿದರೆ (1 ಕೊರಿಂಥ 15:1-3), ನಾವು ಬಾಪ್ತಿಸ್ಮ ಹೊಂದುವಾಗ ನಾವು ರಕ್ಷಿಸಲ್ಪಡುವೆವು (ಮಾರ್ಕ 16:15, 16). "ನಂಬಿದವನು ಹಾಗೂ ಬಾಪ್ತಿಸ್ಮ ಹೊಂದಿದವನು" ಎಂಬ ಪದ ಪ್ರಯೋಗವನ್ನು ಕುರಿತು, ಭಾಷಾಂತರಕಾರರಾದ ರೊಬರ್ಟ್ ಬ್ರಾಚರ್ ಮತ್ತು ಯೂಜಿನ್ ನೈಡಾ ಹೀಗೆ ಬರೆದಿದ್ದಾರೆ, "... ರಕ್ಷಿಸಲ್ಪಡುವ ಮನಷ್ಯನನ್ನು ವಿವರಿಸುವಲ್ಲಿ ಏಕ ನಿಶ್ಚಿತ ಗುಣವಾಚಕವು ಎರಡೂ ಗುಣವಾಚಕ ಗಳನ್ನು ಕೂಡಿಸುತ್ತದೆ; ಈ ಮಾತುಗಳನ್ನು 'ಬಾಪ್ತಿಸ್ಮ ಹೊಂದಿದ ವಿಶ್ವಾಸಿ' ಎಂದು ಭಾಷಾಂತರಿಸಬಹುದು."[9] ಈ ವ್ಯಕ್ತಿಯು "ರಕ್ಷಿಸಲ್ಪಡುವ ವ್ಯಕ್ತಿಯಾಗಿದ್ದಾನೆ."

ನಂಬಿಕೆಯಿಂದ ಬಾಪ್ತಿಸ್ಮವು ಬೆಲೆಯುಳ್ಳದ್ದಾಗಿರುವದಿಲ್ಲ, ಇಲ್ಲವೇ ದೇವರ ಚಿತ್ತಕ್ಕನುಗುಣವಾಗಿ ವ್ಯಕ್ತಪಡಿಸಲ್ಪಡದಿದ್ದರೆ ನಂಬಿಕೆಯು ಬೆಲೆಯುಳ್ಳದ್ದು ಆಗಿರುವದಿಲ್ಲ. ಬಾಪ್ತಿಸ್ಮ ಹೊಂದುವದರಿಂದ ಯೇಸುವು ಹೂಣಿಡಲ್ಪಟ್ಟನು ಮತ್ತು ಪುನರುತ್ಥಾನ ಹೊಂದಿದನು ಎಂಬ ವಿಶ್ವಾಸವನ್ನು ವ್ಯಕ್ತಪಡಿಸುತ್ತೇವೆ, ಯಾಕಂದರೆ ಅದೇ ಕೃತ್ಯದಲ್ಲಿ ಆತನೊಂದಿಗೆ ಕೂಡಿಸಲ್ಪಡಲು ಹಾಗೂ ಆತನೊಂದಿಗೆ ಸತತವಾಗಿ ಅನ್ಯೋನ್ಯತೆಯಲ್ಲಿ ಪ್ರವೇಶಿಸಲು ನಮ್ಮನ್ನು ಒಪ್ಪಿಸಿಕೊಳ್ಳುತ್ತೇವೆ. ಆತನ ರಕ್ತದಲ್ಲಿ, ಹೂಣಿಡುವಿಕೆಯಲ್ಲಿ ಮತ್ತು ಪುನರುತ್ಥಾನದಲ್ಲಿ ನಂಬಿಕೆ ಇರುವಾಗ, ಬಾಪ್ತಿಸ್ಮದಲ್ಲಿ ಆತನೊಂದಿಗೆ ಹೂಣಿಸಿಡಲ್ಪಡುವದರೊಂದಿಗೆ ನಂಬಿಕೆಯನ್ನು ವ್ಯಕ್ತಪಡಿಸಬೇಕು.

---

ಟಿಪ್ಪಣಿಗಳು

[1]"ಪಾಪಿಯ ಪ್ರಾರ್ಥನೆಯನ್ನು" ಪುನರಾವರ್ತಿಸುವುದು ಪರಿಶುದ್ಧ ಬರಹದ ಬೋಧನೆ ಯಾಗಿರದೇ ಇರುವಾಗ, ಅದು ರಕ್ಷಣೆಯು "ನಂಬಿಕೆ ಮಾತ್ರದ" ಮೇಲೆ ಇದೆಯೆಂದು ಹೇಳಿ ಕೊಳ್ಳುವ ಹೆಚ್ಚಾದವರಿಂದ ಬೋಧಿಸಲ್ಪಟ್ಟಿದೆ. ಪ್ರಾರ್ಥನೆಯನ್ನು ಹೇಳುವುದು ಕ್ರಿಸ್ತನಲ್ಲದವನನ್ನು ದೇವರ ಕೃಪೆಯೊಳಗೆ ತರಲಾರದು, ಯಾಕಂದರೆ "ಅವನ ಪಾಪಗಳನ್ನು ತೊಳೆದುಕೊಳ್ಳಬೇಕು"

ಎಂದು (ಅಪೊಸ್ತಲರ ಕೃತ್ಯಗಳು 9:10, 11; 22:16) ಅನನೀಯನು ಹೇಳುವದಕ್ಕಿಂತ ಮೊದಲು ಪೌಲನು ಪ್ರಾರ್ಥನೆ ಮಾಡಿದ್ದನು. [2]R. Bultmann, *"pisteuo,"* in *Theological Dictionary of the New Testament,* ed. Gerhard Kittel and Gerhard Friedrich, trans. and abr. Geoffrey W. Bromiley (Grand Rapids, Mich.: Wm. B. Eerdmans Publishing Co., 1985), 854. [3]*Apeithia* ಎಂಬುದು "ಅವಿಧೇಯತೆ" ಎಂದು ಆರು ಸಲ ಹೇಳಲ್ಪಟ್ಟಿದೆ; *apeitheo* ಎಂಬುದು "ನಂಬಲಿಲ್ಲ" ಎಂದು ಒಂದು ಸಲ (ನನ್ನ ಬೈಬಲಿನಲ್ಲಿ ಮಾರ್ಜಿನ್ನಿನಲ್ಲಿ ಒಂದು ಟಿಪ್ಪಣಿ), "ಅವಿಧೇಯರಾದವರು" ಎಂದು ಹತ್ತು ಸಲ, ಮತ್ತು "ವಿಧೇಯನಾಗಬೇಡ" ಎಂದು ಮೂರ ಸಲ ಭಾಷಾಂತರಿಸಲ್ಪಟ್ಟಿದೆ. *Apeithes* ಎಂಬುದು "ಅವಿಧೇಯನಾದವನು" ಎಂದು ಆರು ಸಲ ಭಾಷಾಂತರಿಸಲ್ಪಟ್ಟಿದೆ. ನ್ಯೂ ಅಮೇರಿಕನ್ ಸ್ಟ್ಯಾಂಡರ್ಡ್ ಬೈಬಲ್ ಸತತವಾಗಿ ಈ ಪದಗಳನ್ನು "ಅವಿಧೇಯನಾಗು" ಎಂದು ಭಾಷಾಂತರಿಸುತ್ತದೆ; ಕಿಂಗ್ ಜೇಮ್ಸ್ ಆವೃತ್ತಿಯಲ್ಲಿ ಹೆಚ್ಚಾದ ಕಡೆಗಳಲ್ಲಿ "ಅಪನಂಬಿಕೆಯಿಡು" ಇಲ್ಲವೇ "ಅಪನಂಬಿಕೆ" ಎಂದು ಭಾಷಾಂತರಿಸುತ್ತದೆ. [4]*The Book of Discipline of the United Methodist Church* (Nashville: United Methodist Publishing House, 1976), 57. [5]ನಂಬಲಿಕ್ಕೆ ಬರುವವರು ಇನ್ನೂ ದೇವರ ಮಕ್ಕಳಾಗಿರಲಿಕ್ಕಿಲ್ಲ, ಆದರೆ ಅವರಿಗೆ "ದೇವರ ಮಕ್ಕಳಾಗುವ ಹಕ್ಕು" ಇರುತ್ತದೆ (ಯೋಹಾನ 1:12) "ಆದರೂ ಹಿರೀ ಸಭೆಯವರಲ್ಲಿಯೂ ಅನೇಕರು ಆತನನ್ನು ನಂಬಿದರು. ಆದರೆ ತಮಗೆ ಸಭೆಯಿಂದ ಬಹಿಷ್ಕಾರವಾದೀತೆಂದು ಫರಿಸಾಯರಿಗೆ ಅಂಜಿಕೊಂಡು ಅದನ್ನು ಜನರ ಮುಂದೆ ಹೇಳಲಿಲ್ಲ" ಎಂದು ಯೋಹಾನ 12:42 ಹೇಳುತ್ತದೆ. ಈ ಅಧಿಕಾರಿಗಳು ನಂಬಿದರೂ, ಯೇಸುವು ಅವರನ್ನು ತಂದೆಯ ಮುಂದೆ ಅಲ್ಲಗಳೆಯುವನು ಯಾಕಂದರೆ ಅವರು ಆತನನ್ನು ಕರ್ತನೆಂದು ಅರಿಕೆ ಮಾಡಲಿಲ್ಲ (ನೋಡಿರಿ ಮತ್ತಾಯ 10:33; ರೋಮಾಪುರ 10:9, 10). [6]Alexander Campbell, *Christian Baptism with Its Antecedents and Consequents* (Nashville: McQuiddy Printing Co., 1913), 205. [7]Henry Wansbrough, gen. ed., The New Jerusalem Bible (New York: Doubleday, 1985), 1875, n6a. [8]Douglas J. Moo, *The Epistle to the Romans*, The New International Commentary on the New Testament, gen. eds. Ned B. Stonehouse, F. F. Bruce, and Gordon D. Fee (Grand Rapids, Mich.: Wm. B. Eerdmans Publishing Co., 1996), 366. [9]Robert G. Bratcher and Eugene A. Nida, *A Translator's Handbook on the Gospel of Mark* (New York: United Bible Societies, 1961), 511.

## ವಿಶ್ವಾಸ ಮತ್ತು ನೀತಿ ನಿರ್ಣಯದ ಆಶೀರ್ವಾದಗಳು ಮತ್ತು ನಿತ್ಯಜೀವ

ನೀತಿ ನಿರ್ಣಯ (ದೇವರ ದೃಷ್ಟಿಯಲ್ಲಿ ಸರಿಯಾಗಿರುವಂತೆ ಮಾಡಲ್ಪಡುವುದು) ಮತ್ತು ನಿತ್ಯ ಜೀವವು ಬಾಪ್ತಿಸ್ಮಕ್ಕೆ ಹೊಂದಿಸಲ್ಪಟ್ಟಿರುವದಿಲ್ಲ, ಆದರೆ ವಿಶ್ವಾಸಕ್ಕೆ - ಅದಕ್ಕೆ ಸರಿಯಾಗಿ ಹೊಂದಿಸಲ್ಪಟ್ಟಿದೆ. ವಿರೋಧವಾಗಿ, ರಕ್ಷಣೆ ಮತ್ತು ಕ್ಷಮಾಪಣೆಯು ಬಾಪ್ತಿಸ್ಮಕ್ಕೂ ಮತ್ತು ನಂಬಿಕೆಗೂ ಸಂಬಂಧಿಸಲ್ಪಟ್ಟಿವೆ - ಅದು ಸರಿಯಾಗಿಯೇ ಇದೆ. ನೀತಿ ನಿರ್ಣಯ ಮತ್ತು ನಿತ್ಯ ಜೀವವು ನಂಬಿಕೆಯಲ್ಲಿ ಮುಂದುವರಿಯುವದರ ಮೇಲೆ ಅವಲಂಭಿಸಿವೆ. ಯೇಸುವು ಮರಣಪಟ್ಟದ್ದು, "ನಿಮ್ಮನ್ನು ಪರಿಶುದ್ಧರನ್ನಾಗಿಯೂ ನಿರ್ದೋಷಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ ತನ್ನ ಸನ್ನಿಧಿಯಲ್ಲಿ ನಿಲ್ಲಿಸಬೇಕೆಂದಿರುವದಕ್ಕಾಗಿ, ಮತ್ತು ಸುವಾರ್ತೆಯ ಮೇಲೆ ನಿರೀಕ್ಷೆಯಿಂದ ನಿಂತುಕೊಳ್ಳುವದಕ್ಕಾಗಿ ಇರುತ್ತದೆ" (ಕೊಲೊಸ್ಸೆ 1:22ಬಿ, 23ಎ). ಬಾಪ್ತಿಸ್ಮವು ಒಂದು - ಸಮಯದ ಘಟನೆಯಾಗಿದೆ, ಆದರೆ ವಿಶ್ವಾಸವು ಒಬ್ಬನು ನಿತ್ಯಜೀವವನ್ನು ಸ್ವೀಕರಿಸುವದಕ್ಕಾಗಿ ಸದಾಕಾಲ ಇರುವಂಥದ್ದಾಗಿದೆ.

ನಿತ್ಯಜೀವವು ನಂಬುವದರ ಮುಖಾಂತರ ಬರುತ್ತದೆಂದು ಬೋಧಿಸುವ ವಾಕ್ಯಭಾಗಗಳು ಒಂದೇ ಸಮಯದ ನಂಬಿಕೆಯನ್ನು ಬೋಧಿಸುವದಿಲ್ಲ.

"ನಂಬುವವನು" ಎಂಬ ಪದವು ಗ್ರೀಕಿನಲ್ಲಿ (ಯೋಹಾನ 3:16, 36) ವರ್ತಮಾನ ಕಾಲ ಕೃದ್ವಾಚರದಲ್ಲಿದೆ, ಇದು ಸಮಯದ ಒಂದು ಹಂತದ ಏಕಕಾರ್ಯವನ್ನು ಸೂಚಿಸದೇ ಮುಂದುವರಿಯುತ್ತಲೆ ಇರುವ ಕೃತಿಯನ್ನು ಸೂಚಿಸುತ್ತದೆ.[1]

ನಿತ್ಯ ಜೀವವು ಒಂದು ಸಲ ಮಾತ್ರ ನಂಬುವವರಿಗಾಗಿ ಅಲ್ಲ, ಆದರೆ ಯೇಸುವಿನಲ್ಲಿ ನಂಬುತ್ತಾ ಮುಂದುವರಿಯುವವರಿಗಾಗಿ ಇರುತ್ತದೆಯೆಂದು ಯೋಹಾನ 3:16 ಬೋಧಿಸುತ್ತದೆ. ನೀತಿ ನಿರ್ಣಯದ ಬಗೆಗೂ ಅದೇ ಸತ್ಯವಿರುತ್ತದೆ: ಅದು ಮುಂದುವರಿಯುತ್ತಲೇ ಇರುವ ನಂಬಿಕೆಯ ಪರಿಣಾಮವಾಗಿರುತ್ತದೆ. ಇನ್ನೊಂದು ಕಡೆಯಲ್ಲಿ, ರಕ್ಷಣೆಯನ್ನೂ ಪಾಪಗಳ ಕ್ಷಮಾಪಣೆಯನ್ನೂ ಒಳಗೊಂಡಿರುವ ನೂತನ ಜನನವು ಒಂದು - ಸಲದ ಘಟನೆಯಾಗಿದೆ. ಕ್ಷಮಾಪಣೆ ಮಾಡುವ ಯೇಸುವಿನ ರಕ್ತದಲ್ಲಿ ಒಬ್ಬನ ನಂಬಿಕೆಯು ಅವನನ್ನು ಬಾಪ್ತಿಸ್ಮ ಹೊಂದಿಕೊಳ್ಳಲು ಪ್ರೋತ್ಸಾಹಿಸುವಾಗ ಅದು ಸಂಭವಿಸುತ್ತದೆ (ಯೋಹಾನ 3:5; ರೋಮಾಪುರ 3:25; ಕೊಲೊಸ್ಸೆ 2:12, 13). ಬಾಪ್ತಿಸ್ಮವು ನೂತನ ಜೀವನವನ್ನು ಪ್ರಾರಂಭಿಸುವ ನೂತನ ಜನನವಾಗಿದೆ (ರೋಮಾಪುರ 6:4), ಅದರಲ್ಲಿ ನಾವು ನಿತ್ಯಜೀವವನ್ನು ಹೊಂದಿಕೊಳ್ಳಲು ನಂಬಿಕೆಯಿಂದ ಮುಂದುವರಿಯತಕ್ಕದ್ದು.

---

## ವಿಶ್ವಾಸ ಮತ್ತು ದೇವರ ಕೃಪೆಯ ಆಶೀರ್ವಾದಗಳು

ದೇವರ ರಕ್ಷಿಸುವ ಕೃಪೆಯಲ್ಲಿ ನಾವು ಸೇರುವುದು ವಿಶ್ವಾಸದ ಮುಖಾಂತರ ಬರುತ್ತದೆ: "ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ. ನಾವು ಈಗ ನೆಲೆಗೊಂಡಿರುವ ದೇವರ ಕೃಪಾಶ್ರಯದಲ್ಲಿ ಆತನ ಮುಖಾಂತರವೇ ನಂಬಿಕೆಯಿಂದ ಪ್ರವೇಶವಾಯಿತು. ಮತ್ತು ದೇವರ ಮಹಿಮೆಯನ್ನು ಹೊಂದುವೆವೆಂಬ ಭರವಸದಿಂದ ಉಲ್ಲಾಸವಾಗಿದ್ದೇವೆ" (ರೋಮಾಪುರ 5:1, 2). ಕೃಪೆಯು ನಂಬಿಕೆಯ ಮೇಲೆ ಅವಲಂಭಿಸಿ ಶರತ್ತಿನೊಂದಿಗೆ ಪ್ರವೇಶಿಸಿತು; ನಂಬಿಕೆಯು ಕ್ರಿಯೆಯ ಮುಖಾಂತರ ಪೂರ್ತಿಗೊಳಿಸಲ್ಪಟ್ಟಿತು (ಯಾಕೋಬ 2:22).

ಕೃಪೆಯು ಕ್ರಿಸ್ತನಲ್ಲಿರುತ್ತದೆ (2 ತಿಮೊಥೆ 2:1), ಬಾಪ್ತಿಸ್ಮದ ಮೂಲಕ ಆತನಲ್ಲಿ ಪ್ರವೇಶಿಸುವೆವು (ರೋಮಾಪುರ 6:3). ನಾವು ಬಾಪ್ತಿಸ್ಮ ಹೊಂದುವಾಗ - ಕೃಪೆಯಲ್ಲಿರುವಲ್ಲಿ - ನಂಬಿಕೆಯ ಮುಖಾಂತರ ಕೃಪೆಯಲ್ಲಿ ಮತ್ತು ಕ್ರಿಸ್ತನಲ್ಲಿ ಪ್ರವೇಶಿಸುವೆವು. ಬಾಪ್ತಿಸ್ಮದ ಸಮಯವು ನಾವು ಕ್ರಿಸ್ತನನ್ನು ಪ್ರವೇಶಿಸುವ ಸಮಯವಾಗಿರುವದರಿಂದ, ಅದು ನಮಗೆ ರಕ್ಷಣೆಯನ್ನು ತರುವ ದೇವರ ಕೃಪೆಯಲ್ಲಿ ಪ್ರವೇಶಿಸುವ ಸಮಯವೂ ಆಗಿರತಕ್ಕದ್ದು (ಎಫೆಸ 2:8).

---

ಟಿಪ್ಪಣಿ

[1]The present participle represents " 'linear' action" (C. F. D. Moule, *An Idiom Book of New Testament Greek,* 2d ed. [New York: Cambridge University Press, 1959], 99), and is, like the present infinitive, "timeless and durative" (A. T. Robertson, *A Grammar of the Greek New Testament,* 4th ed. [Nashville: Broadman Press, 1923], 891).

© 2009 Truth for Today